(b) The Government has sanctioned Rs. 2,85,000 to the Hassan City Municipality for acquiring the Land and for distribution of Sites,

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ ಹಾಸನ ಸಿಟಿಯಲ್ಲಿ 1133 ಜನಕ್ಕೆ ಸೈಟ್‌ಗಳನ್ನು ಕಲ್ಪಿಸಿಕೊಡಲು 2,85 000 ರೂಪಾಯಿಗಳನ್ನು ಕೊಟ್ಟಿದ್ದೇವೆಂದು ತಿಳಿಸಿದ್ದೀರಿ. ಎರಡು ಲಕ್ಷ ಎಂಬತ್ತೈದು ಸಾವಿರ ರೂಪಾಯಿಗಳನ್ನ ಒದಗಿಸಿರುವುದು ನಿಜವಾದರೆ ಸೈಟುಗಳನ್ನು ಡಿಸ್ಟ್ರಿಬ್ಯೂಷನ್ ಮಾಡುವ ವಿಚಾರವಲ್ಲಿ ಸಿಟಿ ಮುನಿಸಿಪಾಲಿಟಿಯವರು ತೆಗೆದುಕೊಂಡ ಕಾರ್ಯಕ್ರಮವೇನು ?

† ಶ್ರೀ ಡಿ. ಕೆ. ನಾಯ್ಕರ್.—ಆಗ ಹೊನ್ನನಗೇರಿಯಲ್ಲಿ 45 ಎಕರೆ 27 ಗುಂಟೆ ಜಮೀನನ್ನು ಅಕ್ವೈರ್ ಮಾಡಿಕೊಂಡಿದ್ದಾರೆ. ಅದು ಫೈನಲ್ ಸ್ಟೇಜ್‌ನಲ್ಲಿ ಇದೆ. ಆ ಜಮೀನನ್ನು ಅಕ್ವೈರ್ ಮಾಡಿಕೊಂಡಮೇಲೆ ಪ್ಲಾನ್ ಪ್ರಕಾರವಾಗಿ ಲೇಔಟ್ ಮಾಡಿ 904 ಸೈಟುಗಳಾಗಿ ವಿಂಗಡಿಸಿರುತ್ತಾರೆ. ಇದರಲ್ಲಿ ಕಾರ್ನರ್ ಸೈಟ್, ಷಾಪ್ ಸೆಂಟರ್ಸ್ ಎಂದು 95 ಪರ್ಸೆಂಟ್ ಕಳೆದು ಉಳಿದುದನ್ನು ಪೊಜಿಷನ್‌ಗೆ ತೆಗೆದುಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ,—ಕಳೆದ 2 ವರ್ಷದಿಂದಲೂ ಹಾಸನದ ಮೇಯರ್‌ರವರು ಜಮೀನನ್ನು ಅಕ್ವೈಯರ್ ಮಾಡಿಕೊಳ್ಳತಕ್ಕಂಥ ಸಾಧ್ಯತೆ ನಡೆಯುತ್ತಲೇ ಇದೆ, ಮೂರು ತಿಂಗಳಲ್ಲಿ ಜಮೀನನ್ನು ಅಕ್ವಯರ್ ಮಾಡಿಕೊಳ್ಳಬಹುದು, ಹೀಗಿದ್ದರೂ ಎರಡು ವರ್ಷಗಳಿಂದ ಅಕ್ವೈರ್ ಮಾಡಿಕೊಳ್ಳದೆ ಇರುವುದಕ್ಕೆ ಇರುವ ಅಡ್ಡಿ ಆತಂಕಗಳೇನು ಸ್ವಾಮಿ ?

ಶ್ರೀ ಕೆ. ಡಿ. ನಾಯ್ಕರ್.—ನನಗೆ ತಿಳಿದ ಪ್ರಕಾರ ಈ ವಿಷಯ ಕೊನೆಯ ಹಂತದಲ್ಲಿರುತ್ತದೆ. ಒಂದು ವೇಳೆ ತಡವಾಗಿದ್ದರೆ ಅದನ್ನು ತೀರ್ವ ಮಾಡುವ ಪ್ರಯತ್ನ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರದವರು 2,85,000 ರೂಪಾಯಿಗಳನ್ನು ಹಾಸನ ಮುನಿಸಿಪಾಲಿಟಿಗೆ ಪತಕ್ಕಾಗಿ ಕೊಟ್ಟದ್ದು. ಯಾವ ತಿಂಗಳಲ್ಲಿ ಕೊಟ್ಟಿದ್ದು ? ಈ ರಾಗಾಯ್ತು ಆ ಹಣವನ್ನು ಏನು ಮಾಡಿದ್ದಾರೆ ಎಂಬುದನ್ನು ತಿಳಿಸುತ್ತೀರಾ ಸ್ವಾಮಿ

ಶ್ರೀ ಕೆ. ಡಿ ನಾಯ್ಕರ್.—ಜಮೀನು ಆಕ್ವಿಜಿಷನ್‌ಗಾಗಿ ಹಣವನ್ನು ಕೊಟ್ಟಿರತಕ್ಕದ್ದಾಗಿರುತ್ತದೆ, ಯಾವ ತಿಂಗಳಲ್ಲಿ ಕೊಟ್ಟಿದ್ದು ಎನ್ನುವುದಕ್ಕೆ ನನ್ನಲ್ಲಿ ಮಾಹಿತಿ ಇಲ್ಲ ಜಮೀನಿಗೆ ಹಣವನ್ನು ಕೊಡಬೇಕಾಗಿರುತ್ತದೆ, ಚಾರ್ಜಸ್ ಕಟ್ಟಬೇಕಾಗಿರುತ್ತದೆ, ಅನಂತರ ಪೊಜಿಷನ್ ತೆಗೆದುಕೊಳ್ಳಬೇಕಾಗಿರುತ್ತದೆ,

Institution started by the Chickballapur Municipality

446 SRI C LYRE GOWDA (Vemagal)—,Will the Minister for Municipal Administration and Political Pensieons, bepleased to state.—

(a) the date on which the following institutions were started by the Chickballapur Municipality at Chickballapur ; who was the Municipal President then ;

1. Municipal Teachers' Training Institute.
2. Municipal College of Education.
3. Muncipal College of Physical Education.

(*b*) whether any objections were raised in the Audit Report of the Municipality regarding "Municipal college of Education loan Account" for the year 1971-72 and 1972-73 for diverting huge sums of money from Municipal College funds for runing the above institutions ;

(*c*) whether it is a facts that sum of Rs. 25,000 was paid to University of Mysore on 28-7-1972 through Canara Bank by the Principal, Municipal College, towards the capital fund deposit for starting the above noted B.Ed. college ;

(*d*) whether it has come to the notice of the Government that Shri C. V Venkatarayappa, M. L. A is now Managing these institutions ;

(*e*) if so, the reasons for allowing him to run these institutions when he ceases to be the Municipal President from 10-5-1973;

(*f*) the undertaking given by the Municipality in writ petition No. 2120/1975 for running these institutions on the file of the Hon'ble High Court ;

(*g*) the act on the Government has taken for implimenting the same?

SRI D. K. NAIKAR (Minister for Municipal Administration and Political Pensions)

(*a*) The institutions were started on following dates :
1-6-1970

During 1972-73
During 1973-74

Sri C. V. Venkatarayappa was the Muncipal President upto 10-5-1973

(*b*) Yes

(*c*) Yes

(*d*) Yes

(*e*) It is reported that on the expiry of the term of the Municipal council, the then Administrator was not appraised of the Proper position. There was also no administrative sanction.

(*f*) The Municipality has undertaken to manage these institutions in Writ Petition No. 2120/1975.

(*g*) The proposals in this regard is under examination in consultation with the State Account Department as the matter involves financial implications.

ಶ್ರೀ ಸಿ. ಬೈರೇಗೌಡ —'ಬಿ'ಗೆ ಉತ್ತರವಾಗಿ ಆಡಿಟ್ ಅಬ್‌ಜಕ್ಷನ್ ಬಂದಿರುತ್ತದೆ ಎಂದು ಹೇಳಿರುತ್ತೀರಿ. ಅದು ಯಾವರೀತಿ ಆಡಿಟ್ ಅಬ್‌ಜಕ್ಷನ್ ಬಂದಿರುತ್ತದೆ ?.

† ಶ್ರೀ ಡಿ.ಕೆ. ನಾಯ್ಕರ್.—ಆಡಿಟ್ ಅಬ್‌ಜಕ್ಷನ್‌ನಲ್ಲಿ ಚಿಕ್ಕಬಳ್ಳಾಪುರದ ಮುನಿಸಿಪಾಲಿಟಿಯವರಂ ಮೊದಲು ಸರ್ಕಾರದ ಪರವಾನಿಗೆಯನ್ನು ಪಡೆದು ಒಂದು ಫುಸ್ಟ್‌ಗ್ರೇಡ್ ಕಾಲೇಜನ್ನು ನಡೆಸುತ್ತಿದ್ದರಂ. ಅನಂತರ ೪-೫ ಇನ್‌ಸ್ಟಿಟ್ಯೂಟ್‌ಗಳನ್ನು ಸರ್ಕಾರದ ಮಂಜೂರಾತಿ ಇಲ್ಲದೆ ನಡೆಸುವ ಕಾರ್ಯಕ್ರಮವನ್ನು ತೆಗೆದುಕೊಂಡಿರುತ್ತಾರೆ. ಹೀಗೆ ನಡೆಸತಕ್ಕಂಥ ಕಾಲೇಜುಗಳಲ್ಲಿ ವಸೂಲಾಗತಕ್ಕಂಥ ಹಣ ಏನು ಇದೆ ಅದು ಸರ್ಕಾರದ ನಿಯಮಾವಳಿ ಪ್ರಕಾರ ಕಟ್ಟಲ್ಲ. ಪರವಾನಿಗೆ ಯನ್ನು ಪಡೆಯದೆ ಕಾಲೇಜುಗಳನ್ನು ನಡೆಸುತ್ತಿರುವುದರಿಂದ ಆ ಹಣ ವನ್ನು ಆರ್ಡರ್ ಮಾಡಿಲ್ಲ.

ಶ್ರೀ ಸಿ. ಬೈರೇಗೌಡ —ಸರ್ಕಾರಿ ಪರವಾನಿಗೆ ಇಲ್ಲದೆ ೪-೫ ಕಾಲೇಜುಗಳನ್ನು ನಡೆಸುತ್ತಿರುವುದು ಕಾನೂನಿಗೆ ಲೋಪ ಮಾಡಿದಂತಾಗುವುದಿಲ್ಲವೆ? ಕಾನೂನಿಗೆ ಲೋಪಮಾಡಿದಮೇಲೆ ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀ ಡಿ.ಕೆ ನಾಯ್ಕರ್.—ಆಡಿಟ್ ಅಬ್‌ಜಕ್ಷನ್ ಬಂದಮೇಲೆ ಡೆಪ್ಯುಟಿ ಕಮಿಷನರ್‌ರವರಂ ಕಂಟ್ರೋಲರಿಗೆ ಬರೆದಂ ಕೇಳಿದ್ದಾರೆ. ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಮುನಿಸಿಪಾಲಿಟಿ ಕಾಲೇಜ್‌ಗಳನ್ನು ತೆಗೆದುಕೊಳ್ಳಬೇಕೆನ್ನುವ ವಿಚಾರ ಇದ್ದುದರಿಂದ ಕೋರ್ಸ್‌ಕರವಾಗಿ ಅವರಿಂದ ರಿಪೋರ್ಟ್ ಬಂದಮೇಲೆ ಸರ್‌ಚಾರ್ಜ್ ಕೊಡಬೇಕಂ, ಎನ್ನುವ ಬಗ್ಗೆ ಶೋಕಾಸ್ ನೋಟಿಸ್‌ನ್ನು ಡೆಪ್ಯುಟಿ ಕಮಿಷನರ್‌ರವರು ಸಂಬಂಧಪಟ್ಟವರಿಗೆ ಕೊಟ್ಟಿದ್ದಾರೆ.

ಶ್ರೀ ಎಚ್.ಡಿ. ದೇವೇಗೌಡ —'ಈ'ಗೆ ಉತ್ತರವಾಗಿ ವಿಧಾನಸಭಾ ಸದಸ್ಯರಾದ ಶ್ರೀ ವೆಂಕಟ ರಾಯಪ್ಪನವರು ಈಗ ಈ ಸಂಸ್ಥೆಗಳನ್ನು ನಡೆಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಹೌದು ಎಂದು ಹೇಳಿದ್ದಾರೆ. ಅದು ಹೇಗೆ ಅವರು ನಡೆಸಿದರು ?.

ಶ್ರೀ ಡಿ.ಕೆ. ನಾಯ್ಕರ್.—ಅದು ಹೇಗೆ ಎಂದು ಹೇಳಿದರೆ ಒಂದು ಕಾಲೇಜನ್ನು ಸರ್ಕಾರದ ಮಂಜೂರಾತಿಯಂನ್ನು ಪಡೆದಂ ನಡೆಸುತ್ತಿದ್ದಾಗ ಇನ್ನು ಉಳಿದ ಕಾಲೇಜುಗಳನ್ನು ಎಜ್ಯುಕೇಷನ್ ಟ್ರಸ್ಟ್ ಎಂದು ಮಾಡಿಕೊಂಡಂ ಚೇರ್‌ಮೆನ್‌ರಾಗಿದ್ದುಕೊಂಡು ಸರ್ಕಾರದ ಮಂಜೂರಾತಿ ಇಲ್ಲದೆ ನಡೆಸಿದರು ಎನ್ನುವ ವಿಚಾರ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಶ್ರೀ ಎಚ್.ಡಿ. ದೇವೇಗೌಡ.—ಇದು ಮುನಿಸಿಪಾಲಿಟಿಯ ಹಣ. ಕಾಲೇಜುಗಳನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರ ಪರವಾನಿಗೆ ಕೊಡುವುದು. ಕೊಡದೆ ಇರುವುದು ಅದಂ ಬೇರೆ ಪ್ರಶ್ನೆ. ಎರಡನೆಯ ಪ್ರಶ್ನೆ ಏನೆಂದರೆ ಅಲ್ಲಿ ಖರ್ಚು ಮಾಡಿರತಕ್ಕಂಥ ಹಣವೆಲ್ಲ ಮುನಿಸಿಪಾಲಿಟಿಯದಾಗಿರುತ್ತದೆ. ಹೀಗಿರುವಾಗ ಮುನಿಸಿಪಾಲಿಟಿಯಂ ಪ್ರೆಸಿಡೆಂಟ್‌ರವರು ಮನೆಗೆ ಹೋದರೆ ಮುನಿಸಿಪಾಲಿಟಿಯವರು ಇನ್‌ಸ್ಟಿಟ್ಯೂಷನ್‌ನ್ನು ರನ್‌ಮಾಡಬೇಕು ಇನ್‌ಸ್ಟಿಟ್ಯೂಷನ್‌ನ್ನು ಅವರು ಹೊತ್ತುಕೊಂಡಂ ಹೋಗಲು ಸಾಧ್ಯವೇ ? ಸರ್ಕಾರದವರು ಅನುಮತಿಯನ್ನು ಕೊಡಬಾರದಿತ್ತು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಡಿ ಕೆ ನಾಯ್ಕರ್ —ವಿರೋಧಪಕ್ಷದ ನಾಯಕರಂ ಸರಿಯಾಗಿ ನಾನು ಹೇಳಿದ್ದನ್ನು ಅರ್ಥ ಮಾಡಿಕೊಂಡಿಲ್ಲವೆಂದಂ ನಾನು ಭಾವಿಸುತ್ತೇನೆ. ಮುನಿಸಿಪಾಲಿಟಿ ಫಂಡಿನಿಂದ ಕಾಲೇಜುಗಳಿಗೆ ಹಣವನ್ನು ಕೊಡುತ್ತಾ ಇಲ್ಲ. ಈ ಕಾಲೇಜುಗಳಲ್ಲಿ ಡೊನೇಷನ್, ಫೀಸ್ ಎಂದು ಮತ್ತು ಇನ್ನು ಬೇರೆ ಬೇರೆ ಬಾಬಿ ಂದ ಬರತಕ್ಕಂಥ ಹಣವನ್ನು ಇದಕ್ಕೆ ಕೊಟ್ಟಿದ್ದಾರೆ. ಇದನ್ನು ಕಾನೂನುರೀತ್ಯ ಕೊಟ್ಟಿಲ್ಲವೆಂದು, ಇರ್‌ಗ್ಯೂಲರ್ ಪೇಮೆಂಟ್ ಎಂದು ಹೇಳಿ ಆಡಿಟ್ ಅಬ್‌ಜಕ್ಷನ್ ಮಾಡಿದ್ದಾರೆ.

SRI H.D. DEVEGOWDA.—He is trying to mislead the whole issue. These four institutions have been started by the Municipalities. It is categorical. How could an Ex-Municipal President be authorised to run these institution ? That is all what I wanted to know.

ಶ್ರೀ ಡಿ ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೆ ಮೊದಲು ಒಂದು ಕಾಲೇಜನ್ನು ನಡೆಸುವಾಗ ಪರವಾನಿಗೆಯನ್ನು ಕೊಟ್ಟಿದ್ದೇವೆಂದು ಹೇಳಿದ್ದೇನೆ. ಮಿಕ್ಕ ಕಾಲೇಜುಗಳನ್ನು ಪ್ರಾರಂಭಮಾಡುವಾಗ ಸರ್ಕಾರದ ಪರವಾನಿಗೆಯನ್ನು ಪಡೆದಿಲ್ಲ. ಅವರು ಮುನಿಸಿಪಾಲಿಟಿ ಅಧ್ಯಕ್ಷರಿದ್ದು ಹೊರಗೆ ಹೋದಾಗ ಪ್ರಿನ್ಸಿಪಾಲರವರಿಗೆ, ಇಂಥಿಂಥ ಕಾಲೇಜುಗಳು ಯಾವ ಯಾವ ಪೊಸಿಷನ್‌ನಲ್ಲಿ ಇತ್ತು ಎನ್ನುವ ಬಗ್ಗೆ ಮಾಹಿತಿಯನ್ನು ಅಡ್ಮಿನಿಸ್ಟ್ರೇಟರ್‌ಗೆ ತಿಳಿಸಬೇಕಾಗಿತ್ತು. ಮಿಕ್ಕ ಕಾಲೇಜುಗಳ ಅಡ್ಮಿನಿಸ್ಟ್ರೇಷನ್ ತೆಗೆದು ಕೊಳ್ಳುವಂತೆ ಕೇಳದೆ ಅವರೇ ಮುಂದುವರಿಸಿಕೊಂಡು ತಮ್ಮ ಅಧಿಕಾರವನ್ನು ಮಾಡಿದ್ದಾರೆ. ಅಡ್ಮಿನಿಸ್ಟ್ರೇಟರ್‌ಗೆ ಸಂಪೂರ್ಣವಾದ ಮಾಹಿತಿಯನ್ನು ಕೊಟ್ಟಿಲ್ಲ

SRI KAGODU THIMMAPPA —The Municipality has started these four colleges By virtue of his Presidentship,, he became the President of these institutions. When he ceased to be a Municipal President, automatically, he ceased to be the President of these institutions. ಆದ್ದರಿಂದ ಅಡ್ಮಿನಿಸ್ಟ್ರೇಟರ್ ಪ್ರೆಸಿಡೆಂಟ್ ಕೆಲಸವನ್ನು ನಿರ್ವಹಿಸಬೇಕಾಗುತ್ತದೆ. ಅದನ್ನು ಬಿಟ್ಟು ಅಧ್ಯಕ್ಷರೇ ಮುನಿಸಿಪಲ್ ಕಾಲೇಜ್‌ಗಳನ್ನು ನಡೆಸತಕ್ಕಂಥ ಅಧಿಕಾರವನ್ನು ಎಕ್ಸ್ ಪೆಸಿಡೆಂಟರ್ ಮುಂದುವರಿಸಿದ್ದಾರೆ.

ಶ್ರೀ ಡಿ.ಕೆ ನಾಯ್ಕರ್.—ಅಂತಲೇ ಈಗ ಅವರಿಗೆ ಸರ್‌ಚಾರ್ಜ್ ಮಾಡಬೇಕೆಂದು ಹೇಳಿ ಶೋಕಾಸ್ ನೋಟೀಸ್ ಕೊಟ್ಟಿದ್ದೇವೆ.

ಶ್ರೀ ಎಚ್.ಡಿ. ದೇವೇಗೌಡ.—ಇಲ್ಲಿ ಸರ್‌ಚಾರ್ಜ್ ಹಾಕುವುದು ಪ್ರಶ್ನೆಯಲ್ಲ. ನಾಲ್ಕು ಸಂಸ್ಥೆಗಳನ್ನು ನಡೆಸುತ್ತಿರುವುದು ಮುನಿಸಿಪಾಲಿಟಿಯ ಹಣದಿಂದ. ನಾಲ್ಕು ವರ್ಷಗಳಿಂದ ಅನಧಿಕೃತವಾಗಿ ಅವರು ಸಂಸ್ಥೆಯ ಕಾರಬಾರವನ್ನು ಮಾಡುತ್ತಾ ಇದ್ದಾರೆ. He is not entitled to administer these institutions. ಎಕ್ಸ್ ಪ್ರೆಸಿಡೆಂಟರನ್ನು ಮುಂದುವರಿಸಿಕೊಂಡು ಹೋಗಲು ಬಿಟ್ಟಿರತಕ್ಕಂಥ ಅಡ್ಮಿನಿಸ್ಟ್ರೇಟರನ್ನು ಸಸ್‌ಪೆಂಡ್‌ಮಾಡಿ ಮುನಿಸಿಪಾಲಿಟಿಯ ಆಸ್ತಿಯನ್ನು ಕಾಯುಬೇಕಾಗಿತ್ತು. ಶ್ರೀ ದೇವರಾಜ ಅರಸ್‌ರವರು ಕಲ್ಲಳ್ಳಿಗೆ ವಿಧಾನಸೌಧವನ್ನು ಹೊತ್ತುಕೊಂಡು ಹೋಗುವುದನ್ನ್ಯಾಗುವುದಿಲ್ಲ ಎಕ್ಸ್ ಪ್ರೆಸಿಡೆಂಟರು ನಾಲ್ಕು ಇನ್‌ಸ್ಟಿಟ್ಯೂಷನ್‌ಗಳನ್ನು ನಡೆಸುತ್ತಿರುವುದನ್ನು ನೋಡಿದರೆ ಇದು ಸರ್ಕಾರವೋ ಮಂತ್ರಿಗಳೋ ಎಂದು ಕೇಳಬೇಕಾಗುತ್ತದೆ.

ಶ್ರೀ ಡಿ.ಕೆ. ನಾಯ್ಕರ್.—ಅದು ಯಾವುದನ್ನು ನೋಡಿಸುತ್ತೇನೆ, ನಾನು ಹೇಳುವುದನ್ನು ತಾವು ಅರ್ಥಮಾಡಿಕೊಂಡರೆ ನಾನು ಹೇಳುವುದಕ್ಕೆ ಸಾಧ್ಯ. ಪರವಾನಿಗೆಯನ್ನು ಕೊಟ್ಟ ಒಂದು ಕಾಲೇಜನ್ನು ಬಿಟ್ಟು ಮಿಕ್ಕ ಕಾಲೇಜುಗಳ ಸಲುವಾಗಿ ಒಂದು ಎಜ್ಯುಕೇಷನ್ ಟ್ರಸ್ಟ್ ಮಾಡಿಕೊಂಡು, ಆ ಟ್ರಸ್ಟ್‌ನ ಚೇರ್‌ಮನ್‌ರಾಗಿ ಟ್ರಸ್ಟ್ ಅಧಿಕಾರದೊಳಗೆ ಇಷ್ಟು ಕಾಲೇಜ್‌ಗಳನ್ನ ತೆಗೆದುಕೊಂಡು ಅವರು ನಡೆಸುತ್ತಿದ್ದರು ಅದನ್ನು ಅವರಿಗೆ ನಡೆಸುವುದಕ್ಕೆ ಅಧಿಕಾರವಿಲ್ಲವೆನ್ನತಕ್ಕಂಥ ಕಾರಣವನ್ನು ಮಾಡಿ ಹೈಕೋರ್ಟಿಗೆ ರಿಟ್ ಪಿಟೀಷನ್ ಮಾಡಿದಾರೆ. ಅದಾದನಂತರ ಆ ಕಾಲೇಜುಗಳನ್ನು ಮುನಿಸಿಪಾಲಿಟಿಯೇ ನಡೆಸಬಹುದೆಂದು ಎನ್ನುವ ಒಪ್ಪಿಗೆಯನ್ನು ಕೊಟ್ಟಿದಾರೆ. ಅದನ್ನು ಮುನಿಸಿಪಾಲಿಟಿಯವರು ತೆಗೆದುಕೊಳ್ಳಬೇಕೆ ಬೇಡವೇ ಎನ್ನುವ ಪ್ರಶ್ನೆ ಅಸಿಸ್ಟೆಂಟ್ ಕಮಿಷನರ ಮುಂದೆ ಇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಮುನಿಸಿಪಾಲಿಟಿಯವರು ಆ ಕಾಲೇಜನ್ನು ನಡೆಸುತ್ತೇವೆಂದು ಒಪ್ಪಿಗೆ ಕೊಟ್ಟಿದ್ದಾರೆ ಎಂದಮೇಲೆ ಅದು ಮುನಿಸಿಪಾಲಿಟಿ ಕಾಲೇಜ್ ಎಂದು ಸ್ಪಷ್ಟವಾಯಿತು ಅದ್ದರಿಂದ all the colleges belongs to the Municipality. ಮುನಿಸಿಪಾಲಿಟಿ ಅಧ್ಯಕ್ಷರ ಟರ್ಮ್ ಆಗಿಹೋದಮೇಲೆ ಆ ಜಾಗಕ್ಕೆ ಅಡ್ಮಿನಿಸ್ಟ್ರೇಟರ್ ಬರಬೇಕೇ ಏನ : ಶ್ರೀ ವೆಂಕಟರಾಯಪ್ಪನವರು ಬಕ್ಕುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ಅವರು ಒಂದು ಟ್ರಸ್ಟ್ ಮಾಡಿಕೊಂಡು ಇದನ್ನು ತೆಗೆದುಕೊಂಡಿದ್ದಾರೆಂದು ಹೇಳಿದ್ದಾರೆ ಅವರು ಹೇಳಿದ್ದು, ನಿಮಗೆ ಅರ್ಥವಾಗಲಿಲ್ಲವೇ ?.

ಶ್ರೀ ಕಾಗೋಡು ತಿಮ್ಮಪ್ಪ.—ಹಾಗಲ್ಲ ಅಧ್ಯಕ್ಷರೇ,

ಶ್ರೀ ಎಚ್.ಡಿ. ದೇವೇಗೌಡ —ಅವರು ಹೇಳಿದ್ದು ಅರ್ಥವಾಗಿದೆ. ಮೊದಲು ಅವರು ಒಂದು ಕಾಲೇಜಿನ ನಡೆಸುತ್ತಿದ್ದರಂ ಆ ಕಾಲೇಜಿನ ವ್ಯಾಪ್ತಿಯೊಳಗೆ ಈ ಇನ್‌ಸ್ಟಿಟ್ಯೂಷನ್‌ಗಳನ್ನು ತರಂವುದರ ಮೂಲಕ ಟ್ರಸ್ಟ್ ಎಂದು ಹೇಳಿ ಅದರ ಕಾರ್ಯಭಾರ ನಡೆಸುತ್ತಾ ಇರುವುದರಿಂದ ಅದಕ್ಕೆ ಎಲ್ಲಾ ಹಣವೂ ವಿನಿಯೋಗವಾಗಿದೆ ಎಂದು ಹೇಳಿದ್ದಾರೆ. ಅದಂ ನಮಗೆ ಅರ್ಥವಾಗಿದೆ. ಮುನಿಸಿಪಾಲಿಟಿ ಫಂಡ್‌ನಿಂದ ಸ್ಥಾಪನೆ ಮಾಡಿದಂತ ಈ ಳ ಇನ್‌ಸ್ಟಿಟ್ಯೂಷನ್‌ಗಳನ್ನು ಯಾವುದೋ ಪ್ರೈವೇಟ್ ಟ್ರಸ್ಟಿಗೆ ಎಂಟ್ರಸ್ಟ್ ಮಾಡುವುದಕ್ಕೆ ಅಧಿಕಾರ ಕೊಟ್ಟವರು ಯಾರು ? ಇದರಲ್ಲಿ ಅಕ್ರಮಂ ನಡೆದಿದೆ. ಅವರನ್ನು ಪ್ರಾಸಿಕ್ಯೂಟ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಡಿ.ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೇ, ನಾನಂ ಈ ಸಂದರ್ಭದಲ್ಲಿ ಈ ಬಗ್ಗೆ ವಿವರವಾಗಿ ಹೇಳಿದರೆ ಅವರಿಗೆ ಅರ್ಥವಾಗುತ್ತದೆಂದು ನನ್ನ ಅಭಿಪ್ರಾಯ. ಈಗಿರತಕ್ಕಂಥ ೬ ಕಾಲೇಜುಗಳು ಎಂದರೆ (೧) ಫಸ್ಟ್ ಗ್ರೇಡ್ ಕಾಲೇಜು, (೨) ಮುನಿಸಿಪಲ್ ಕಾಲೇಜ್ ಆಫ್ ಎಜುಕೇಷನ್, (೩) ಮುನಿಸಿಪಲ್ ಕಾಲೇಜ್ ಆಫ್ ಫಿಸಿಕಲ್ ಎಜುಕೇಷನ್, (೪) ಮುನಿಸಿಪಲ್ ಕಾಲೇಜ್ ಆಫ್ ಫಾರ್ಮಸಿ, (೫) ಮುನಿಸಿಪಲ್ ಈವಿನಿಂಗ್ ಕಾಲೇಜ್, (೬) ಟೀಚರ್ಸ್ ಟ್ರೈನಿಂಗ್ ಕಾಲೇಜ್ ಈ ಆರಂ ಕಾಲೇಜುಗಳನ್ನು ಆರಂ ವರ್ಷಗಳಿಂದ ನಡೆಸಿದ್ದಾರೆ. ಈ ೬ ಕಾಲೇಜುಗಳ ಪೈಕಿ ಫಸ್ಟ್ ಗ್ರೇಡ್ ಕಾಲೇಜು ಎಂದು ಏನಿದೆ ಇದಕ್ಕೆ ಸರ್ಕಾರದವರಂ ಹಣವನ್ನು ವಂಜುರಾತಿ ಕೊಟ್ಟಿದ್ದಾರೆ. ಇದಕ್ಕಾಗಿ ೧ ಲಕ್ಷ ರೂಪಾಯಿಗಳನ್ನು ಗ್ರಾಂಟ್ ಇನ್ ಏಡ್ ಕೊಡಬೇಕು ಎಂದು ಮುನಿಸಿಪಾಲಿಟಿಯವರು ಪರವಾನಿಗೆ ಕೊಟ್ಟಿದ್ದಾರೆ. ಉಳಿದ ಕಾಲೇಜುಗಳಿಗೆ ಪರವಾನಿಗೆ ಕೊಟ್ಟಿಲ್ಲ. ಈ ರೀತಿ ಫಸ್ಟ್ ಗ್ರೇಡ್ ಕಾಲೇಜಿಗೆ ಕೊಟ್ಟಿರುವುದರಿಂದ ಆ ಕಾಲೇಜಿನಲ್ಲಿ ಫಂಡನ್ನು ಅದಕ್ಕೆ ಉಪಯೋಗ ಮಾಡಿಕೊಂಡಿದ್ದಾರೆ.

SRI H.D. DEVEGOWDA.—That is also Municipal College.

ಶ್ರೀ ಡಿ ಕೆ. ನಾಯ್ಕರ್.—ಆಮೇಲೆ ಇದು ಅಕ್ರಮವಾದುದಂ, ಇದಂ ಸರಿಯಾದುದಲ್ಲ ಎಂದು ಆಡಿಟ್ ಚೆಕ್‌ನಿಂದ ತಿಳಿದು ಬಂದ ಪ್ರಕಾರ ಸರ್‌ಚಾರ್ಜ್ ಪ್ರೊಸೀಡಿಂಗ್ಸ್‌ನ್ನು ಹಾಕಿದ್ದಾರೆ. ಶೋಕಾಸ್ ನೋಟೀಸನ್ನು ಕೊಟ್ಟಿದ್ದಾರೆ. ಅದಕ್ಕೆ ಅವರಂ ಉತ್ತರ ಕೊಟ್ಟಿಲ್ಲ. ಅದಕ್ಕೆ ಉತ್ತರ ಕೊಟ್ಟನಂತರ ಫೈನಲ್ ಆರ್ಡರ್ ಆಗುತ್ತದೆ. ಆಮೇಲೆ ಮುನಿಸಿಪಾಲಿಟಿ ಅಧ್ಯಕ್ಷರ ಪೀರಿಯಡ್ ಮುಗಿದನಂತರ ಅಲ್ಲಿ ಅಡ್ಮಿನಿಸ್ಟ್ರೇಟರನ್ನು ನೇಮಿಸಿದಾಗ ಅವರೇ ಕಾಲೇಜುಗಳನ್ನು ನಡೆಸುತ್ತಿದ್ದಾರೆ ಎನ್ನುವ ಮಾಹಿತಿಯನ್ನು ಪ್ರಿನ್ಸಿಪಾಲ್‌ರವರು ಕೊಟ್ಟಿಲ್ಲ. ಅವರು ಒಂದಂ ಕಾಲೇಜನ್ನು ತೆಗೆದುಕೊಂಡಿದ್ದಾರೆ. ಮಿಕ್ಕ ಕಾಲೇಜುಗಳನ್ನು ವೆಂಕಟರಾಯಪ್ಪನವರೇ ಒಂದು ಟ್ರಸ್ಟ್ ಮಾಡಿಕೊಂಡು, ಅದಕ್ಕೆ ಚೇರ್ಮನ್ನರಾಗಿ ಮುಂದುವರಿಸಿಕೊಂಡಂ ಬಂದಿದ್ದಾರೆ. ಆ ಒಂದು ಕಾಲೇಜನ್ನು ಮುನಿಸಿಪಾಲಿಟಿಯವರಂ ತೆಗೆದುಕೊಳ್ಳಬೇಕೇ ಅಥವಾ ಬೇಡವೇ ಎನ್ನತಕ್ಕಂಥ ಪ್ರಶ್ನೆ ಅಸಿಸ್ಟೆಂಟ್ ಕಮೀಷನರ್‌ರವರ ಮುಂದೆ ಇದೆ.

ಶ್ರೀ ಎಚ್.ಡಿ. ದೇವೇಗೌಡ.—ಅಲ್ಲಿ ಒಂದಂ ಕಾಲೇಜನ್ನು ನಡೆಸುವುದಕ್ಕೆ ಮುನಿಸಿಪಾಲಿಟಿಯಂವರಂ ಅನುಮತಿ ಕೊಟ್ಟಿದ್ದಾರೆ. ಅವರಂ ಅನುಮತಿ ಕೊಟ್ಟರುವ ಕಾಲೇಜಿನ ಹಣವನ್ನು ಅನುಮತಿ ಕೊಡದೇ ಇರುವ ಕಾಲೇಜಿಗೆ ಉಪಯೋಗಿಸಿಕೊಂಡಂ ಆ ಹಣ ಖರ್ಚಾಗಿದೆ. ಶ್ರೀ ವೆಂಕಟರಾಯಪ್ಪನವರಂ ಸ್ವಂತ ಟ್ರಸ್ಟ್ ಮಾಡಿಕೊಂಡಂ ಹಣ ತೆಗೆದುಕೊಂಡು ಹೋಗುತ್ತಾರೆ ಎಂದು ಹೇಳಿದ್ದಾರೆ. ಅವರಂ ಹೇಗೆ ತೆಗೆದಂಕೊಂಡಂ ಹೋಗಂತ್ತಾರೆ ? How that trust was formed ? Whether the Municipality has passed any resolution for formation of the trust Who has approved that ? Please enlighten us in this matter.

ಶ್ರೀ ಡಿ. ಕೆ. ನಾಯಕರ್.—ಮಾನ್ಯ ಅಧ್ಯಕ್ಷರೇ ಈ ವಿಷಯವನ್ನು ಅಸಿಸ್ಟೆಂಟ್ ಕಮಿಷನರ್ ಕಡೆಗೆ ಕಳುಹಿಸಿದಾಗ ಅವರಂ ಮ್ಯಾನೇಜಿಂಗ್ ಟ್ರಸ್ಟ್‌ಗೆ ಕೇಳಿದ್ದಾರೆ. ಏನೆಂದರೆ "Whether the sanction of the Government has been obtained for starting each college, if so, copies of the Government order, audited statement showing the details of the receipts and expenditure for each college, year-wise from inception, statements of donations, funds collected under each college and details of expenditure. Government's remarks after receiving yearwise details of assets and liabilities." ಇವೆಲ್ಲವನ್ನೂ ಕಳುಹಿಸಿ ಎಂದಂ ಅವರನ್ನು ಕೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಆ ಕಾಲೇಜನ್ನು ಮುನಿಸಿಪಾಲಿಟಿಯವರೇ ನಡೆಸುತ್ತಾರೆಂದು ಅಂಡರ್‌ಟೇಕಿಂಗ್ ತೆಗೆದುಕೊಂಡು ಆದಮೇಲೆ ಅದನ್ನು ಮುನಿಸಿಪಾಲಿಟಿಯವರೇ ನಡೆಸಬೇಕೆಂದು ಇದೆ. ಆ ರೀತಿ ಅಂಡರ್‌ಟೇಕಿಂಗ್ ಆದಮೇಲೆ ಆ ಕಾಲೇಜನ್ನು ಏತಕ್ಕೆ ತೆಗೆದುಕೊಳ್ಳಲಿಲ್ಲ ? ಅವರಿಗೇ ನಡೆಸುವುದಕ್ಕೆ ಏತಕ್ಕೆ ಬಿಟ್ಟಿದ್ದೀರಿ ?

ಶ್ರೀ ಡಿ. ಕೆ. ನಾಯಕರ್.—ಮಾನ್ಯ ಕಾಗೋಡು ತಿಮ್ಮಪ್ಪನವರು ಆ ನಾಲ್ಕು ಕಾಲೇಜುಗಳನ್ನು ಮುನಿಸಿಪಾಲಿಟಿಯವರು ತೆಗೆದುಕೊಳ್ಳಬೇಕೆಂದು ಹೇಳಿದರೂ ಅದರ ಪೂರ್ಣ ಲಯಬಿಲಿಟಿ ಮುನಿಸಿಪಾಲಿಟಿಗೆ ಬರುತ್ತದೆಂಬುದನ್ನು ಅವರು ತಿಳಿದುಕೊಳ್ಳಬೇಕು.

ಶ್ರೀ ಎಚ್.ಡಿ. ದೇವೇಗೌಡ.—ನಾನು ಹೇಳುತ್ತೇನೆ ಅದು ಮುನಿಸಿಪಾಲಿಟಿ ಆಸ್ತಿ ಆಗಿದೆ. ಅದನ್ನು ಅಷ್ಟು ಸುಲಭವಾಗಿ ಸೂರೆಮಾಡುವುದಕ್ಕೆ ಆಗುವುದಿಲ್ಲ. ಮುನಿಸಿಪಾಲಿಟಿಯವರೇ ಆ ಕಾಲೇಜನ್ನು ನಡೆಸಬೇಕೆಂದು ಸರ್ಕಾರ ಪರವಾನಿಗಿ ಕೊಟ್ಟಿರುವುದರಿಂದ ಆ ಕಾಲೇಜನ್ನು ಬೇರೆಯವರು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಮತ್ತು ಹೈಕೋರ್ಟಿನವರು ಈ ಎಲ್ಲಾ ಸಂಸ್ಥೆಗಳನ್ನು ಮುನಿಸಿಪಾಲಿಟಿಯವರು ನಡೆಸಬೇಕೆಂದು ತೀರ್ಪು ಕೊಟ್ಟಿರುವುದನ್ನು ಬಚ್ಚಿಟ್ಟುಕೊಂಡು ಈ ಒಗ್ಗೆ ಡಿ.ಸಿ.ಗೆ ಬರೆದಿದ್ದೇವೆಂದು ಹೇಳಿದ್ದಾರೆ. ನಾನು ಕೇಳುತ್ತೇನೆ ಡಿ.ಸಿಯವರು ಈ ಸರ್ಕಾರವನ್ನು ನಡೆಸುತ್ತಿದ್ದಾರೆಯೇ ? ಈ ರೀತಿ ಆಗಬಾರದು. ಶ್ರೀ ವೆಂಕಟಾಚಾಯಪ್ಪನವರು, he is a sitting Member of this House and he cannot knock of this Municipality's property. ಆದ್ದರಿಂದ ಈ ಬಗ್ಗೆ ಸರಿಯಾದ ವಿವರವನ್ನು ಕೊಡಬೇಕು.

ಶ್ರೀ ಡಿ. ಕೆ. ನಾಯಕರ್.—ಮಾನ್ಯ ಅಧ್ಯಕ್ಷರೇ, ಈ ಕಾಲೇಜುಗಳಿಗೆ ಕೇವಲ ೩೪,೦೦೦ ಚಿಲ್ಲರೆ ಹಣವನ್ನು ಕೊಟ್ಟಿದ್ದಾರೆ. ಈ ಹಣ ಕೊಟ್ಟಿರುವುದನ್ನು ಮುನಿಸಿಪಾಲಿಟಿ ಆಸ್ತಿ ಎಂದು ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ಅದಕ್ಕೋಸ್ಕರ ಹಣ ಏನಿದೆ ಅದನ್ನು ವಸೂಲು ಮಾಡುವ ಹಕ್ಕು ನಮಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಬಗ್ಗೆ ಹೈಕೋರ್ಟಿನ ತೀರ್ಮಾನ ಏನಿದೆ ಎಂಬುದನ್ನು ಹೇಳಿ.

ಶ್ರೀ ಡಿ. ಕೆ. ನಾಯಕರ್.—ಅವರಿಗೆ ೩೪,೦೦೦ ಚಿಲ್ಲರೆ ಹಣವನ್ನು ಕೊಟ್ಟಿರುವುದೂ ಏನಿದೆ ಅದರ ಮೇಲೆ ಅವರು ಎಷ್ಟು ಸಾಲವನ್ನು ಮಾಡಿಕೊಂಡಿದ್ದಾರೆಯೋ ಅದರ ಜವಾಬ್ದಾರಿಯನ್ನು ನಾವು ಹೊರಬೇಕೇ ಅಥವಾ ಬಡಬೇಕೇ ಎಂಬ ವಿಚಾರ ಪರಿಶೀಲನೆಯಲ್ಲಿದೆ ನಾವು ಈ ಬಗ್ಗೆ ಪರಿಶೀಲನೆ ಮಾಡುವ ತನಕ ಇದರ ಬಗ್ಗೆ ಸ್ಟೇಟ್ ಅಕೌಂಟ್ಸ್ ಡಿಪಾರ್ಟ್‌ಮೆಂಟ್‌ನವರ ಅಭಿಪ್ರಾಯ ಪಡೆದೂ ಅದನ್ನು ತೆಗೆದುಕೊಳ್ಳುವ ಬಗ್ಗೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಆ ಕಾಲೇಜು ಮುನಿಸಿಪಾಲಿಟಿಗೆ ಸೇರಿದ್ದು, ಬೇರೊಬ್ಬರು ಹಣವನ್ನು ತೆಗೆದುಕೊಳ್ಳುತ್ತಿರುವುದು ನಮಗೆ ಅರ್ಥವಾಗುತ್ತಿಲ್ಲ.

SRI H. M. CHANNABASAPPA —The Municipality has undertaken to manage this Institution in writ-petition No. 2/20, ಆದ್ದರಿಂದ ಹೈಕೋರ್ಟ್ ಆಜ್ಞೆಯನ್ನು ಯಾರೂ ಉಲ್ಲಂಘನೆ ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ಮುನಿಸಿಪಾಲಿಟಿಯವರು ತೆಗೆದುಕೊಳ್ಳಬೇಕೆಂಬುದನ್ನು ಒಪ್ಪಿಕೊಂಡಿದ್ದಾರೆ. ಅದು ಮುನಿಸಿಪಾಲಿಟಿಯವರ ಪ್ರಾಪರ್ಟಿ ಆದ್ದರಿಂದ ಇದರಲ್ಲಿ ಟ್ರಸ್ಟ್ ಹೇಗೆ ಆಯಿತು ಎಂದು ಅನುಮಾನ ವ್ಯಕ್ತಪಡಿಸುವುದು ಸ್ವಾಭಾವಿಕ. ಇದು ಈ ಪ್ರಶ್ನೋತ್ತರ ವೇಳೆಯಲ್ಲಿ ಇತ್ಯರ್ಥವಾಗುವುದು ಕಷ್ಟವಾಗುತ್ತದೆ ಆದ್ದರಿಂದ ಈ ಬಗ್ಗೆ ಅರ್ಧಗಂಟೆ ಚರ್ಚೆ ಮಾಡಿದರೆ ಒಳ್ಳೆಯದಾಗುತ್ತದೆಂದು ನಾನು ಈ ಸಭೆಯಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಬಗ್ಗೆ ಸರ್ಕಾರದ ತೀರ್ಮಾನವೇನು ಎಂಬುದನ್ನು ಹೇಳಿ ಎಂದರೆ ಈ ಬಗ್ಗೆ ಅರ್ಧ ಗಂಟೆ ಚರ್ಚೆ ಮಾಡಿ ಎಂದು ಮಾನ್ಯ ಮಂತ್ರಿಯವರು ಹೇಳುತ್ತಿದ್ದಾರೆ.

ಅಧ್ಯಕ್ಷರು.—ಈ ಬಗ್ಗೆ ಅರ್ಧ ಗಂಟೆ ಚರ್ಚೆ ಮಾಡಿದರೆ ಒಳ್ಳೆಯದು ಎಂದು ಅವರು ಹೇಳುತ್ತಿದ್ದಾರೆ. ಅವರು ಒಳ್ಳೆಯದನ್ನೇ ಹೇಳುತ್ತಿದ್ದಾರೆ.

SRI H.M. CHANNABASAPPA —What I am suggesting is a solution. that is all.

ಶ್ರೀ ಎಚ್. ಡಿ. ದೇವೇಗೌಡ.—ಮೊನ್ನೇ ದಿವಸ ಒಂದು ಪ್ರಶ್ನೆಗೆ ಈ ಪುರಸಭಾಧ್ಯಕ್ಷರ ಕಾಲದಲ್ಲಿ ೬೦ ಸಾವಿರ ರೂಪಾಯಿಗಳ ದುರ್ವ್ಯವಹಾರವಾಗಿದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಯಾವ ಒಂದೂ ಕ್ರಮವನ್ನೂ ತೆಗೆದುಕೊಂಡಿಲ್ಲ. ಆ ೪ ಸಂಸ್ಥೆಗಳನ್ನು ಮುನಿಸಿಪಾಲಿಟಿಯಂವರು ಪ್ರಾರಂಭ ಮಾಡಿ, ಒಂದು ಸಂಸ್ಥೆಗೆ ಪರವಾನಿಗಿ ಕೊಟ್ಟು, ಉಳಿದ ಸಂಸ್ಥೆಗಳನ್ನು ಪುರಸಭಾಧ್ಯಕ್ಷರು ಖಾಸಗೀ ಸಂಸ್ಥೆಗಳ ರೀತಿಯಲ್ಲಿ ವ್ಯವಹಾರ ನಡೆಸುತ್ತಿರುವುದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ ಎಂದರೆ ಇದು ಯಾವ ನೀತಿ ಎಂದು ಕೇಳಬೇಕಾಗಿದೆ. ಆ ಸಾರ್ವಜನಿಕ ಸ್ವತ್ತನ್ನು ಒಬ್ಬ ಕಾಂಗ್ರೆಸ್ ಶಾಸಕರಿಗೆ ಕೊಡಬೇಕು ಎಂದು ನಿಯಮವೇನಾದರೂ ಇದೆಯೇ, ದಯಮಾಡಿ ತಿಳಿಸಿ.

ಶ್ರೀ ಡಿ. ಕೆ. ನಾಯ್ಕರ್. ಮಾನ್ಯ ಅಧ್ಯಕ್ಷರೇ, ಸಾರ್ವಜನಿಕರ ಸ್ವತ್ತು ಎಂದು ಮಾನ್ಯ ದೇವೇಗೌಡರು ಹೇಳಿದರು. ನಾನು ಹೇಳುವುದೇನೆಂದರೆ ಕೇವಲ ೩೪ ಸಾವಿರ ರೂಪಾಯಿಗಳನ್ನು ಮಾತ್ರ ನಮ್ಮ ವಲಿನಿಸಿಪಾಲಿಟಿಯಿಂದ ಕೊಡತಕ್ಕ ಹಣ ಎಂದು ಹೇಳಿದ್ದೇನೆ. ಅದು ಯಾರ ಆಸ್ತಿ ಎಂದು ಹೇಳಿದರು. ನಮಗೂ ಅದೇ ಬೇಕಾಗಿದೆ. ಅದಕ್ಕೆ ಆಸ್ತಿ ಎಲ್ಲಿಂದ ಬಂದಿದೆ, ಯಾರು ಹಣ ಹಾಕಿದ್ದಾರೆ ಎಂಬುದನ್ನು ನೋಡಿ ಅದನ್ನು ತೆಗೆದುಕೊಳ್ಳಬೇಕೋ ಬೇಡವೋ ಎಂಬುದನ್ನು ವಿಚಾರ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ.—ಕರ್ನಾಟಕದಲ್ಲಿ ಇದು.....

ಅಧ್ಯಕ್ಷರು.—ಈ ವಿಷಯವನ್ನು ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳೋಣ

SRI H. D. DEVEGOWDA.—I am unable to understand the attitude of the Minister.

(ಮಾನ್ಯ ದೇವೇಗೌಡರು ಮಾತನಾಡಿ ಕುಳಿತುಕೊಳ್ಳುವಾಗ 'ಥತ್' ಎಂದು ಹೇಳಿ ಕುಳಿತು ಕೊಂಡಿದ್ದಕ್ಕೆ ಮಾನ್ಯ ಸಚಿವರಾದ ನಾಯ್ಕರ್ ಅವರು ಆಕ್ಷೇಪವೆತ್ತಿದರು)

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ದೇವೇಗೌಡರೇ, ಯಾರಿಗೆ ಹೇಳುತ್ತಿದ್ದೀರಿ; ನೀವು ಏನು ಪ್ರಶ್ನೆ ಕೇಳುತ್ತೀರೋ ಕೇಳಿ. ಥತ್ ಎಂದು ಯಾರಿಗೆ ಹೇಳುತ್ತಿದ್ದೀರಿ; I do not like this attitude. The Hon'ble Member must know how to behave He cannot dictate here in this House.
(ಆ ಸಮಯದಲ್ಲಿ ಒಮ್ಮೆಲೆ ೮-೧೦ ಸದಸ್ಯರು ಎದ್ದು ಒಟ್ಟಿಗೆ ಮಾತನಾಡಿದರು —ಗೊಂದಲವಾಯಿತು.)

ಶ್ರೀ ಎಚ್. ಡಿ. ದೇವೇಗೌಡ.—ಇದು ಯಾರ ತಾತನ ಮನೆ ಗಂಟು?

SRI KAGODU THIMMAPPA.—Is it the property of Naikar?

SRI D. K. NAIKAR.—The Hon'ble Members can put any number questions but this attitude of making insinuations is not proper. He can tell me that I am responsible but he cannot behave in this way. ನಾನು ಸರಿಯಾಗಿ ಉತ್ತರ ಕೊಡದಿದ್ದರೆ ಆ ಪ್ರಶ್ನೆಯನ್ನು ತಡೆಹಿಡಿಯುವ ಅಧಿಕಾರ ಅಧ್ಯಕ್ಷರಿಗಿದೆ ಉತ್ತರ ಸಮಾಧಾನವಾಗದಿದ್ದರೆ ಎಷ್ಟು ಪ್ರಶ್ನೆ ಬೇಕಾದರೂ ಕೇಳಲಿ, ಈ ರೀತಿ ಥತ್ ಎಂದು ಹೇಳಿದರೆ ಯಾರು ಕೇಳುತ್ತಾರೆ?

ಶ್ರೀ ಎಚ್. ಡಿ. ದೇವೇಗೌಡ.—ಯಾರ ತಾತನ ಮನೆ ಗಂಟು ಎಂದು ತಿಳಿದುಕೊಂಡಿದ್ದೀರಿ?

ಶ್ರೀ ಡಿ. ಕೆ. ನಾಯ್ಕರ್.—ಮೊದಲು ಸರಿಯಾಗಿ ಮಾತನಾಡುವುದನ್ನು ಕಲಿತುಕೊಳ್ಳಿ.

(ಮತ್ತೆ ಐದಾರು ಜನ ಸದಸ್ಯರು ಒಂದೇ ಸಾರಿ ಮಾತನಾಡತೊಡಗಿದರು. ಸಭೆಯಲ್ಲಿ ಗೊಂದಲವೇರ್ಪಟ್ಟಿತು)

ಅಧ್ಯಕ್ಷರು.—ನಾನು ಎಲ್ಲ ಮಾನ್ಯ ಸದಸ್ಯರುಗಳಿಗೂ ಕೇಳಿಕೊಳ್ಳುವುದೇನೆಂದರೆ ಕೆಲವು ವೇಳೆ ಚರ್ಚೆ ನಡೆಯುವಾಗ ಅಸಮಾಧಾನವಾಗಬಹುದು, ಕೋಪ ಬರಬಹುದು, ರೋಷ ಬರಬಹುದು ಆದರೆ ಅದನ್ನು ವ್ಯಕ್ತಪಡಿಸುವುದಕ್ಕೂ ಒಂದು ರೀತಿನೀತಿ ಇದೆ. ಎಲ್ಲರೂ ಕೋಪ ಮಾಡಿಕೊಂಡು ಒಟ್ಟಿಗೆ ಕೂಗಾಡಿದರೆ ಹೇಗೆ?

ಶ್ರೀ ಡಿ. ಕೆ. ನಾಯ್ಕರ್.—ನಾವು ಏನೆಂದರೂ ಅನ್ನಿಸಿಕೊಳುತ್ತೇವೆ ಎಂಬ ಭಾವನೆ ವಿರೋಧ ಪಕ್ಷದವರಿಗೆ ಬಂದಹಾಗೆ ಕಾಣುತ್ತದೆ.

M. I. G. and L. I. G. houses constructed by the Housing Board.

486. SRI P. M. Bangi (Jamkhandi).—Will the Minister for Housing and Youth Services be pleased to state:—

(a) whether twenty MIG and LIG houses are constructed by Housing Board, Bangalore, adjoining Jamakhandi-Ramathirth Road, near Arts & Science College, Jamakhandi, 1½ years ago;

(b) whether these houses have been allotted by anybody or kept vacant;

(c) whether these houses were advertised for allotment twice;

(d) whether it is a fact that nobody applied for allotment of these houses;

(e) whether it is a fact that staff members of the Arts and Science College, Jamakhandi, applied to the Chairman of the Housing Board, Bangalore, for granting these houses on rental basis during the month of the December 1976;

(f) whether it is a fact that their applications have not been considered by the Housing Board so far;

(g) if so, the steps taken by the Government to urge the Housing Board to grant the houses to the staff members of the Arts and Science College or other needy persons on rental basis;

(h) the reasons for keeping these houses vacant?

SRI R. GUNDU RAO. (Minister for Housing and Youth Services),-

(a) Only twenty LIG houses have been constructed.

(b) Vacant.

(c) Yes.

(d) No.

(e) Yes.

(f) Their application is under consideration.

(g) The Principal, Arts & Science College, Jamakhandi has been requested by the Housing Board to communicate its willingness to purchase these houses on out right sale basis.

(h) For want of demand from the public.